# ಅಂತೂ ಇಂತೂ ಕರಗಿತು ನೋಡಾ ಕಸದ ರಾಶಿ!

## ವರ್ಷಗಟ್ಟಲೆ ಸಂಗ್ರಹಗೊಂಡಿದ್ದ ರಾಶಿರಾಶಿ ಕಸ | ಅಸಾಧ್ಯವಾದುದನ್ನು ಸಾಧಿಸಿ ತೋರಿಸಿದ ರಾಯಚೂರು ಮಹಾನಗರ ಪಾಲಿಕೆ

## ಯಕ್ಲಾಸಪುರ ಸಮೀಪದ ಸುಮಾರು 35 ಎಕರೆಯಲ್ಲಿ ಸಂಗ್ರಹಕೊಂಡಿದ್ದ ಸುಮಾರು 1.5 ಟನ್ ಘನತ್ಯಾಜ್ಯದ ಬೆಟ್ಟ ಇದೀಗ ಖಾಲಿ

• **ರಾಮಕೃಷ್ಣ ದಾಸರಿ**
**ಕನ್ನಡಪ್ರಭ ವಾರ್ತೆ** ರಾಯಚೂರು

ಈ ಹಿಂದೆ ಇದ್ದಂತ ನಗರಸಭೆಗೆ ಅತ್ಯಂತ ದೊಡ್ಡ ತಲೆನೋವಾಗಿ ಮಾರ್ಪಟ್ಟಿದ್ದ ಕಸ ವಿಲೇವಾರಿ ಪ್ರಕ್ರಿಯೇಗೆ ಇದೀಗ ಭರ್ಜರಿ ಸರ್ಜರಿ ನಡೆಯುತ್ತಿದ್ದು, ಆ ನಿಟ್ಟಿನಲ್ಲಿ ಹತ್ತು ಹಲವು ಯೋಜನೆಗಳನ್ನು ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲಾಗುತ್ತಿದೆ.

ನಗರಸಭೆಯಿಂದ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೇಗೇರಿದ ನಂತರ ಎದುರಾಗಿದ್ದ ನಗರದಲ್ಲಿನ ಕಸ ಸಂಗ್ರಹಿಸಿ ಅದನ್ನು ವಿಲೇವಾರಿ ಮಾಡುವುದೇ ದೊಡ್ಡ ಸವಾಲಾಗಿ ಮಾರ್ಪಟ್ಟಿತ್ತು. ಇದೀಗ ಆ ಸಮಸ್ಯೆಗಳು ಒಂದೊಂದಾಗಿ ಪರಿಹಾರದ ಮಾರ್ಗವನ್ನು ಹಿಡಿದಿವೆ. ಇದರಲ್ಲಿ ಪ್ರಮುಖವಾಗಿ ಹಲವಾರು ವರ್ಷಗಳಿಂದ ಯಕ್ಲಾಸಪುರ ಸಮೀಪದಲ್ಲಿ ಲಕ್ಷಾಂತರ ಟನ್ ಪ್ರಮಾಣದ ಸಂಗ್ರಹಗೊಂಡಿದ್ದ ಕಸದ ರಾಶಿಯನ್ನು ಕರಗಿಸಲಾಗಿದೆ.

ಇದಕ್ಕಾಗಿ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ 2022-23 ನೇ ಸಾಲಿನಲ್ಲಿ ಬಿಡುಗಡೆಯಾಗಿದ್ದ ₹3 ಕೋಟಿ 95 ಲಕ್ಷ ಅನುದಾನದ ಜೊತೆಗೆ 15ನೇ ಹಣಕಾಸು ನತ್ತು ರಾಷ್ಟ್ರೀಯ ಹಸಿರು ನ್ಯಾಯ ಪೀಠದ ಅನುದಾನ ( ಎನ್ ಜಿಟಿ) ಅಡಿಯಲ್ಲಿ ಹೆಚ್ಚುವರಿಯಾಗಿ 3 ಕೋಟಿ 94 ಲಕ್ಷ ರು. ಹೀಗೆ ಸುಮಾರು 7.90 ಲಕ್ಷ ರು.ವೆಚ್ಚದಲ್ಲಿ ಕಳೆದ ಜೂನ್ ನಲ್ಲಿ ಟೆಂಡರ್‌ಕರೆದು, ಆಗಸ್ಟ್ ನಲ್ಲಿ ಕೆಲಸವನ್ನು ಆರಂಭಿಸಿ 35 ಎಕರೆಯಲ್ಲಿದ್ದ 1.5 ಟನ್ ತ್ಯಾಜ್ಯದಲ್ಲಿ 28 ಎಕರೆಯಲ್ಲಿಷ್ಟು ಖಾಲಿ ಮಾಡಲಾಗಿದೆ.

**ಲಕ್ಷ ಟನ್ ಕಸದಿಂದ 20 ಸಾವಿರ ಟನ್ ಆರ್‌ಡಿಎಫ್:** ಇಡೀ ರಾಯಚೂರು ನಗರ ದಲ್ಲಿನ ಕಸವನ್ನು ಸಂಗ್ರಹಿಸಿ ಯಕ್ಲಾಸಪುರ ಸಮೀಪದಲ್ಲಿ ರುವ 35 ಎಕರೆ ಪ್ರದೇಶ ದಲ್ಲಿ ಹಾಕಲಾ ಗುತ್ತಿತ್ತು. ಹಲವು ವರ್ಷಗಳಿಂದ ಕಸವು ಹಾಕಿದ್ದರಿಂದ ಆ ಪ್ರದೇಶ ದಲ್ಲಿ ಬೆಟ್ಟದಷ್ಟು ಕಸದ ರಾಶಿಯೇ ನಿರ್ಮಾಣ ಗೊಂಡಿತ್ತು. ಇದರಿಂದಾಗಿ ಸುತ್ತ ಮುತ್ತಲಿನ ಪ್ರದೇಶದಲ್ಲಿ ದುರ್ವಾಸನೆ, ಗಾಳಿ,ಮಣ್ಣ ಸೇರಿದಂತೆ ಪರಿಸರಕ್ಕು ಹಾನಿ ಉಂಟಾಗುತ್ತಿತ್ತು. ಈ ಸಮಸ್ಯೆಯ ಗಂಭೀರತ 'ಯನ್ನು ಅರಿತ ಪಾಲಿಕೆ ಮೊದಲ ಆಯುಕ್ತ ಜುಬಿನ್ ಮಹೋಪಾತ್ರ ಹಾಗೂ ಅಧಿಕಾರಿ, ಸಿಬ್ಬಂದಿ ವರ್ಗವು ಒಂದು ತಂಡ ವಾಗಿ ಕ್ರಿಯಾ ಯೋಜನೆ ಯನ್ನು ರೂಪಿಸಿ ಅದನ್ನು ಅನುಷ್ಠಾನಕ್ಕೆ ತಂದು ಇಂದು ಯಶಸ್ಸು ಕಂಡಿದ್ದಾರೆ. ಯಕ್ಲಾಸಪುರ ದಲ್ಲಿರುವ ಕಸದ ಬೆಟ್ಟಗಳನ್ನು ಕರಗಿಸಲು 4 ರಿಂದ 5 ಜೆಸಿಬಿ ಇಟಾಚಿಗಳನ್ನು ಬಳಸಿ, ಅತ್ಯಾಧುನಿಕ ಯಂತ್ರೋಪಕರಣಗಳಿಂದ ಕಸದ ವಿಂಗಡಣೆ, ಸಂಸ್ಕರಿಸಿ ಮರುಬಳಕೆಗೆ ಅಗತ್ಯವಾದ ಇಂಧನವನ್ನು ರೂಪಿಸಲಾಗಿದೆ. ಒಂದು ಲಕ್ಷ ಟನ್ ಘನತ್ಯಾಜ್ಯವನ್ನು ವಿಂಗಡಿಸುವ, ಚೂರುಚೂರಾಗಿಸಿ, ಅದನ್ನು ಒಣಗಿಸಿ ಸಂಸ್ಕರಿಸಿದ ಆರ್ ಡಿಎಫ್ ನ್ನು ಸಿಮೆಂಟ್ ಕಂಪನಿಗಳಲ್ಲಿ ಪಳೆಯುವಿಕೆ ಇಂಧನಗಳನ್ನಾಗಿ ಬಳಸಲಾಗುತ್ತದೆ. ಘನ-ತ್ಯಾಜ್ಯದಿಂದ ಪಡೆದ ಕ್ಯಾಲೋರಿಫಿಕ್ ಇಂಧನ (ರಿಫ್ಯೂಸೀಡ್ ಡಿರೀವ್ಡ್ ಫ್ಯೂಲ್-ಆರ್ ಡಿ ಎಫ್)ನ್ನು ಸಿಮೆಂಟ್ ಕಂಪನಿಗಳಿಗೆ ಮಾರಾಟ ಮಾಡಲಾಗಿದೆ.ಅದಕ್ಕಾಗಿ ಥರ್ಡ್ ಪಾರ್ಟಿ ಗೆ ಟೆಂಡರ್ ನೀಡಿ ಕಲಬುರಗಿ ಜಿಲ್ಲೆಯಲ್ಲಿರುವ ಸಿಮೆಂಟ್ ಕಂಪನಿಗಳಿಗೆ ಘನ-ತ್ಯಾಜ್ಯದಿಂದ ರೂಪಿಸಿ ಇಂಧನ (ಆರ್‌ಡಿಎಫ್)ನ್ನು ಮಾರಾಟ ಮಾಡಲಾಗಿದೆ.

ಹೀಗೆ ಯಕ್ಲಾಸಪುರ ಘನ ತ್ಯಾಜ್ಯ ಸಂಗ್ರಹದ ಪ್ರದೇಶದಲ್ಲಿ ಸುಮಾರು ವರ್ಷಗಳಿಂದ ಟನ್ ಗಟ್ಟಲೆ ಮರು ಉಪಯೋಗವಾಗದೇ ಬಿದಿದ್ದ ಘನತ್ಯಾಜ್ಯದ ಬೆಟ್ಟಗಳು ಕರಗಿ ಹೋಗಿದ್ದು, ಇಂತಹ ಕಾರ್ಯವು ರಾಯಚೂರು ನಗರದ ಇತಿಹಾಸದಲ್ಲಿಯೇ ಮೊದಲಾಗಿದೆ. ಭವಿಷ್ಯದಲ್ಲಿ ಟನ್ ಗಟ್ಟಲೆ ಘನ-ತ್ಯಾಜ್ಯ ಸಂಗ್ರಹಗೊಳ್ಳದಂತೆ ಎಚ್ಚರಿಕೆಯನ್ನು ವಹಿಸಲಾಗಿದೆ.

ರಾಯಚೂರು ಯಕ್ಲಾಸಪುರ ಸಮೀಪದಲ್ಲಿ ಸುಮಾರು ವರ್ಷಗಳಿಂದ ಸಂಗ್ರಹಗೊಂಡಿದ್ದ ಘನ ತ್ಯಾಜ್ಯದ ರಾಶಿಯ ನೋಟ.

ವೈಜ್ಞಾನಿಕ ಪದ್ಧತಿ, ಯಂತ್ರೋಪಕರಣಗಳ ಮುಖಾಂತರ ಘನತ್ಯಾಜ್ಯ ರಾಶಿ ವಿಂಗಡಿಸಿ, ಸಂಸ್ಕರಣೆ ಮಾಡಿ, ಆರ್‌ಡಿ ಎಫ್ ಗೊಳಿಸಿದ ಬಳಿಕ 28 ಎಕರೆ ಖಾಲಿಯಾಗಿರುವುದು.

■ ಅತ್ಯಾಧುನಿಕ ಯಂತ್ರೋಪಕರಣಗಳ ಬಳಕೆ, ವೈಜ್ಞಾನಿಕ ಪದ್ಧತಿ ಅನುಸರಿಸಿ ಘನತ್ಯಾಜ್ಯದಿಂದ ಇಂಧನ ತಯಾರಿಸಿ ಸಿಮೆಂಟ್ ಕಂಪನಿಗಳಿಗೆ ಮಾರಾಟ

ರಾಯಚೂರು ನಗರದಲ್ಲಿ ಸಂಗ್ರಹಿಸಿದ್ದ ಘನ ತ್ಯಾಜ್ಯವನ್ನು ಯಕ್ಲಾಸಪುರ ಸಮೀಪದ 35 ಎಕರೆಯಲ್ಲಿ ಹಾಕಲಾಗಿತ್ತು. ಅನೇಕ ವರ್ಷಗಳಿಂದ ಟನ್ ಗಟ್ಟಲೆ ಘನ-ತ್ಯಾಜ್ಯವನ್ನು ಅತ್ಯಾಧುನಿಕ ಯಂತ್ರೋಪಕರಣ ಗಳ ನೆರವಿನಿಂದ ವೈಜ್ಞಾನಿಕ ಪದ್ಧತಿಯನ್ನು ಅನುಸರಿಸಿ ವಿಲೇವಾರಿ ಮಾಡಲಾಗಿದ್ದು ಸುಮಾರು 28 ಎಕರೆಯ ಕಸವನ್ನು ತೆರವುಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ಅತ್ಯುತ್ತಮ ಪದ್ಧತಿಯನ್ನು ಘನ-ತ್ಯಾಜ್ಯ ನಿರ್ವಹಣೆಗೆ ಕ್ರಮ ವಹಿಸುತ್ತಿದ್ದು, ಅದಕ್ಕೆ ಸಾರ್ವಜನಿಕರು ಜಾಗೃತರಾಗುವುದರ ಜೊತೆಗೆ ಪಾಲಿಕೆಗೆ ಸಹಕಾರ ನೀಡಬೇಕು.

• **ಜುಬಿನ್ ಮೊಹಾಪಾತ್ರ**, ಆಯುಕ್ತರು, ರಾಯಚೂರು ಮಹಾನಗರಂಳ ಪಾಲಿಕೆ

---

### ಸುದ್ದಿ ಸಿಂಚನ

## ವಿಶ್ವ ಮಲೇರಿಯಾ ದಿನ: ಜನಜಾಗೃತಿ ಕಾರ್ಯಕ್ರಮ

**ರಾಯಚೂರು:** ಸ್ಥಳೀಯ ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ, ಮಹಾನಗರ ಪಾಲಿಕೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಸಹಯೋಗದಲ್ಲಿ ವಿಶ್ವ ಮಲೇರಿಯಾ ದಿನದ ಜಾಗೃತಿ ಕಾರ್ಯಕ್ರಮದ ಸಭೆಯನ್ನು ನಡೆಸಲಾಯಿತು. ಜಿಲ್ಲಾ ಕ್ಷಯರೋಗ ನಿರ್ಮೂಲನಾ ಧಿಕಾರಿ ಹಾಗೂ ಪಾಲಿಕೆ ಆರೋಗ್ಯಾಧಿಕಾರಿ ಡಾ ಮಹಮ್ಮದ್ ಶಾಕೀರ್‌ಸಭೆ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಸಾರ್ವಜನಿಕರು ಯಾವುದೇ ಜ್ವರವಿರಲಿ, ಮೊದಲು ರಕ್ತಲೇಪನ ಪರೀಕ್ಷೆ ಮಾಡಿಸಬೇಕು. ಇದರಿಂದ ಮಲೇರಿಯಾ ಸೇರಿದಂತೆ ಸೋಂಕಿತ ಸೊಳ್ಳೆಗಳ ಕಚ್ಚುವಿಕೆಯಿಂದ ಹರಡುವ ರೋಗ ಗಳ ನಿಯಂತ್ರಣಕ್ಕೆ ಸಾಧ್ಯವಾಗುವುದು ಎಂಬುದನ್ನು ವ್ಯಾಪಕ ಜನಜಾಗೃತಿಗಾಗಿ ಮನವಿ ಮಾಡಿದರು. ಜಿಲ್ಲಾ ಡಿಪಿಡಿಒ ಡಾ.ಚಂದ್ರಶೇಖರಯ್ಯ ಸ್ವಾಮಿ ಮಾತನಾಡಿ, ಸ್ವಯಂ ರಕ್ಷಣಾ ಕ್ರಮಗಳಾದ ಮಲಗುವಾಗ ಸೊಳ್ಳೆ ಪರದೆ ಬಳಕೆ ಮಾಡಬೇಕು. ಕಿಟಕಿಗಳಿಗೆ ಸೊಳ್ಳೆಗಳು ನುಸುಳದಂತೆ ಜಾಲರಿ ಅಳವಡಿಸುವುದು. ಆರೋಗ್ಯ ಇಲಾಖೆಯಿಂದ ನೀಡಲ್ಪಡುವ ಲಾರ್ವ ಹಾರಿ ಗಪ್ಪಿ ಮತ್ತು ಗಂಬೂಷಿಯಾ ಮೀನುಗಳನ್ನು ಶಾಶ್ವತವಾಗಿ ನೀರು ನಿಲ್ಲುವ ಸ್ಥಳಗಳಲ್ಲಿ ಬಿಡಲು ಉಚಿತವಾಗಿ ಪಡೆಯಬಹುದಾಗಿದೆ ಎಂದರು. ಈ ಸಂದರ್ಭದಲ್ಲಿ ಪಾಲಿಕೆಯ ಪರಿಸರ ಅಭಿಯಂತರರು ಜಯಪಾಲ ರೆಡ್ಡಿ, ಬಿಹೆಚ್‌ಇಒ ಸರೋಜಾ ಕೆ, ಎಮ್ಬಿಎಸ್ ಸಂಧ್ಯಾ, ಸೇರಿದಂತೆ ಮಹಾ ನಗರ ಪಾಲಿಕೆ,ಆರೋಗ್ಯ ಇಲಾಖೆ ಸಿಬ್ಬಂದಿ ಇದ್ದರು.

## ಮರು ಮೌಲ್ಯಮಾಪನ: ಪಿಯುಸಿಯಲ್ಲಿ ಉಮೇಶ್ ರಾಜ್ಯಕ್ಕೆ 6ನೇ ರ್‍ಯಾಂಕ್

**ಸಿಂಧನೂರು:** ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶದ ಮರು ಮೌಲ್ಯಮಾಪನದಲ್ಲಿ 6 ಅಂಕಗಳು ಹೆಚ್ಚುವರಿಯಾಗಿ ಬಂದಿದ್ದರಿಂದ ಸಿಂಧನೂರಿನ ಅನಿಕೇತನ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಉಮೇಶ್ ಬಸಪ್ಪ ಆದಾಪುರ ರಾಯಚೂರು ಜಿಲ್ಲೆಗೆ 2ನೇ ರ್‍ಯಾಂಕ್ ಮತ್ತು ರಾಜ್ಯಕ್ಕೆ 6ನೇ ರ್‍ಯಾಂಕ್ ಪಡೆದುಕೊಂಡಿದ್ದಾನೆ ಎಂದು ಪ್ರಾಂಶುಪಾಲ ನಾಗರಾಜ ಮುಕ್ಕುಂದಾ ತಿಳಿಸಿದ್ದಾರೆ. ಬುಧವಾರ ಹೇಳಿಕೆ ನೀಡಿರುವ ಅವರು, ಈ ಮೊದಲು ಇತಿಹಾಸ ವಿಷಯದಲ್ಲಿ 95 ಮತ್ತು ರಾಜ್ಯಶಾಸ್ತ್ರ ವಿಷಯದಲ್ಲಿ 95 ಅಂಕ ಬಂದಿದ್ದವು. ಆದರೆ ಮರು ಮೌಲ್ಯಮಾಪನ ಮಾಡಿದ ನಂತರ ಎರಡೂ ವಿಷಯದಲ್ಲೂ ತಲಾ 98 ಅಂಕಗಳು ಬಂದಿವೆ. ಕಲಾ ವಿಭಾಗದಲ್ಲಿ ಒಟ್ಟು 600 ಅಂಕಗಳಿಗೆ 591 (ಶೇ.98.5) ಫಲಿತಾಂಶ ಪಡೆಯುವ ಮೂಲಕ ಗಮನಾರ್ಹ ಸಾಧನೆ ಮಾಡಿದ್ದಾನೆ ಎಂದು ವಿವರಿಸಿದ್ದಾರೆ.

## ಶಕುಂತಲಾಬಾಯಿ ನಿಧನ

**ಸಿಂಧನೂರು:** ನಗರದ ಬ್ರಾಹ್ಮಣರ ಓಣಿಯ ನಿವಾಸಿ ಶಕುಂತಲಾಬಾಯಿ ಎನ್. ಸ್ವಾಮಿರಾವ್ ವಕೀಲ (92) ಇವರು ಮಂಗಳವಾರ ರಾತ್ರಿ ನಿಧನರಾದರು. ಮೃತರು ಕುಟುಂಬಸ್ಥರು, ಅಪಾರ ಸಂಖ್ಯೆಯಲ್ಲಿ ಬಂಧು-ಬಳಗವನ್ನು ಬಿಟ್ಟು ಅಗಲಿದ್ದು, ಅಂತ್ಯಕ್ರಿಯೆ ಬುಧವಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

---

# ಮಳೆ ಗಾಳಿಗೆ ಧರೆಗುರುಳಿದ ಮರ, ವಿದ್ಯುತ್ ಕಂಬ

## ಸಂಜೆ ಹೊತ್ತಿಗೆ ಏಕಾಏಕಿ ಬಿರುಗಾಳಿ ಮಳೆ | ಗ್ರಾಮೀಣ ಭಾಗದಲ್ಲಿ ಮನೆಗಳಿಗೆ ಹಾನಿ | ಜನಜೀವನ ಅಸ್ತವ್ಯಸ್ತ

• **ಕನ್ನಡಪ್ರಭ ವಾರ್ತೆ** ಮಸ್ಕಿ

ಪಟ್ಟಣದ ಸೇರಿದಂತೆ ತಾಲೂಕಿನ ವಿವಿಧ ಕಡೆಗಳಲ್ಲಿ ಬೀಸಿದ ಭಾರಿ ಗಾಳಿ ಮಳೆಗೆ 70ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಮತ್ತು ಗಿಡ ಮರಗಳು ಧರೆಗುರುಳಿವೆ. ಇದರಿಂದ ಜನಜೀವನ ಅಸ್ತವ್ಯಸ್ತಗೊಂಡಿತು. ಅಲ್ಲದೇ ರಸ್ತೆ ಮಧ್ಯದಲ್ಲಿಯೇ ಕೆಲವೊಂದು ಗಿಡಗಳು ಬಿದ್ದಿದ್ದರಿಂದ ವಾಹನ ಸಂಚಾರಕ್ಕೆ ಅನಾನುಕೂಲವಾಗಿತ್ತು.

ಸೋಮವಾರ ರಾತ್ರಿ ಬೀಸಿದ ಭಾರಿ ಗಾಳಿಗೆ ಬೃಹತ್ ಆಕಾರದ ಮರಗಳು ವಿದ್ಯುತ್ ತಂತಿ ಮೇಲೆ ಬಿದ್ದಿದ್ದರಿಂದ ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಇದರಿಂದ ರಾತ್ರಿ ಕೆಲಕಾಲ ವಿದ್ಯುತ್ ವ್ಯತ್ಯಯ ಉಂಟಾಯಿತು.

ಸಂತೆಕೆಲ್ಲೂರು, ಮಾಟೂರು 15 ಮಾರಲದಿನ್ನಿ, ಉಸ್ಕಿಹಾಳ 8, ತೋರಣದಿನ್ನಿ ಗ್ರಾಪಂ ವ್ಯಾಪ್ತಿಯಲ್ಲಿ 18, ಗೌಡನಭಾವಿ, ಬೆಳ್ಳಿಗನೂರು, ಬಳಗಾನೂರ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ 20, ಮೆದಕಿನಾಳ, ನಾಗರಬೆಂಚಿ 5, ಪಾಮನಕೆಲ್ಲೂರು, ವಟಗಲ್ 12, ಮಟ್ಟೂರು ಗ್ರಾ.ಪಂ ವ್ಯಾಪ್ತಿಯಲ್ಲಿ 5, ವಿದ್ಯುತ್ ಕಂಬಗಳು ನೆಲಕ್ಕುರುಳಿವೆ.

ಅದೃಷ್ಟವಶಾತ್ ಯಾವುದೇ ಅವಘಡ ಸಂಭವಿಸಿಲ್ಲ. ಹಿರೇದಿನ್ನಿ ಸೇರಿದಂತೆ ಕೆಲಕಡೆ ಸಿಡಿಲು ಮರದ ಮೇಲೆ ಬಿದ್ದು ಮರಗಳು ಸುಟ್ಟು ಕರಕಲಾಗಿವೆ.

ಬೆಳಗ್ಗೆಯಿಂದ ಬಿಸಿಲು ಇದ್ದು, ಸಂಜೆ ಹೊತ್ತಿಗೆ ಏಕಾಏಕಿ ಬಿಸಿದ ಬಿರುಗಾಳಿಗೆ ಗ್ರಾಮೀಣ ಭಾಗದಲ್ಲಿ ಮತ್ತು ಪಟ್ಟಣದಲ್ಲಿ ಮನೆ ಕೂರಲು ಹಾಕಿರುವ ತಗಡುಗಳು, ಶೆಡ್ಗಳು ಭಾರಿ ಗಾಳಿಗೆ ಕಿತ್ತಿಹೋಗಿವೆ. ಪಟ್ಟಣದ ಸೇರಿದಂತೆ ವಿವಿಧ ಕಡೆಗಳಲ್ಲಿ ಗಿಡಮರಗಳು ವಿದ್ಯುತ್ ತಂತಿಯ ಮೇಲೆ ಬಿದ್ದದ್ದರಿಂದ ಕೆಲ ಕಾಲ ವಿದ್ಯುತ್ ಪೂರೈಕೆಯಲ್ಲಿ ಅಸ್ತವ್ಯಸ್ತ ಉಂಟಾಯಿತು.

ಮಸ್ಕಿ ತಾಲೂಕಿನ ಗ್ರಾಮೀಣ ಭಾಗದಲ್ಲಿ ಭಾರಿ ಗಾಳಿಗೆ ಮರವೊಂದು ನೆಲಕ್ಕುರುಳಿರುವುದು.

ಸೋಮವಾರ ರಾತ್ರಿ ಭಾರಿ ಗಾಳಿ ಸಮೇತ ಮಳೆಯಾಗಿದ್ದರಿಂದ ಗಾಳಿಗೆ ಮರಗಳು ವಿದ್ಯುತ್ ತಂತಿ ಮೇಲೆ ಬಿದ್ದು, 70ಕ್ಕೂ ಹೆಚ್ಚು ವಿದ್ಯುತ್ ಕಂಬಗಳ ಬಿದ್ದಿವೆ. ಜೆಸ್ಕಾಂ ಸಿಬ್ಬಂದಿ ಸರಿಪಡಿಸುತ್ತಿದ್ದಾರೆ. ಜನರಿಗೆ ತೊಂದರೆ ಆಗದಂತೆ ನೋಡಿಕೊಳ್ಳುತ್ತೇವೆ.

• **ವೆಂಕಟೇಶ,** ಎಇಇ ಜೆಸ್ಕಾಂ ಉಪ ವಿಭಾಗ ಮಸ್ಕಿ.

## ಮುದಗಲ್‌ನಲ್ಲಿ ಸಿಡಿಲಿಗೆ ಎರಡು ಆಕಳು ಬಲಿ

**ಮುದಗಲ್:** ಪಟ್ಟಣದ ಹೊರವಲಯದ ಹೊಲವೊಂದರಲ್ಲಿ ಕಟ್ಟಿಹಾಕಲಾದ ಎರಡು ಆಕಳುಗಳಿಗೆ ಸಿಡಿಲು ಬಡಿದು ಸಾವಿಗೀಡಾದ ಘಟನೆ ಬುಧವಾರ ಸಂಜೆ ಜರುಗಿದೆ.ಮುದಗಲ್ ಪೊಲೀಸ್ ಠಾಣ ವ್ಯಾಪ್ತಿಯಲ್ಲಿ ಜರುಗಿದೆ. ಸಣ್ಣ ಗ್ಯಾನಪ್ಪ, ಮೇಗಳಪೇಟೆ ಅವರ ಎರಡು ಆಕಳುಗಳು ಹೊಲದಲ್ಲಿ ಮೇಯಿಸಲು ಕಟ್ಟಿಹಾಕಲಾಗಿದ್ದು ಈ ವೇಳೆ ಸಿಡಿಲೆರಗಿ ಸಾವನ್ನಪ್ಪಿವೆ.

---

# ಆಸ್ತಿ ವಿವಾದ: ಅತ್ತಿಗೆಗೆ ಚಾಕುವಿನಿಂದ ಇರಿತ, ಅಣ್ಣನ ಮಗನಿಗೂ ಇರಿದು ಹತ್ಯೆ

• **ಕನ್ನಡಪ್ರಭ ವಾರ್ತೆ** ಸಿಂಧನೂರು

ತಾಲೂಕಿನ ಅಲಬನೂರು ಗ್ರಾಮದಲ್ಲಿ ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ಅಣ್ಣನ ಹೆಂಡತಿಗೆ ಚಾಕುವಿನಿಂದ ಇರಿದು ಕೊಲೆಗೆ ಪ್ರಯತ್ನಿಸಿ, ಅಡ್ಡ ಬಂದ ಅಣ್ಣನ ಮಗನ ಹೊಟ್ಟೆಗೆ ಚಾಕುವಿನಿಂದ ಚುಚ್ಚಿ ಕೊಲೆ ಮಾಡಿರುವ ಘಟನೆ ಬುಧವಾರ ಬೆಳಿಗ್ಗೆ ನಡೆದಿದೆ.

ಸಿರುಗುಪ್ಪದಿಂದ ಬಸವರಾಜ ಇತ್ತೀಚಿಗೆ ಅಲಬನೂರು ಗ್ರಾಮಕ್ಕೆ ಬಂದು ತನ್ನ ತಾಯಿಯ ಮನೆಯಲ್ಲಿದ್ದನು. ಸಹೋದರ ಸಿದ್ದಪ್ಪ ಆಲ್ವಿ ಮದುವೆ ಕಾರ್ಯಕ್ರಮದ ನಿಮಿತ್ತ ಹತ್ತಿ ಗುಡ್ಡಕ್ಕೆ ಅಡುಗೆ ಮಾಡಲು ತೆರಳಿದ್ದನು. ಈ ಸಂದರ್ಭದಲ್ಲಿ ಅತ್ತಿಗೆ ಅಮೃತ ಸಿದ್ದಪ್ಪ ಆಲ್ವಿ ಅವರೊಂದಿಗೆ ಆಸ್ತಿ ಪಾಲಿಗಾಗಿ ಬಸವರಾಜ ಜಗಳ ತೆಗೆದಿದ್ದಾನೆ. ಜಗಳ ವಿಕೋಪಕ್ಕೆ ಹೋಗಿದ್ದರಿಂದ ಅತ್ತಿಗೆಯ ಹೊಟ್ಟೆ ಚಾಕುವಿನಿಂದ ಬಸವರಾಜ ಇರಿದು ಕೊಲೆ ಮಾಡಲು ಪ್ರಯತ್ನಿಸಿದ್ದಾನೆ. ಇದನ್ನು ತಡೆಯಲು ಹೋದ ಸಹೋದರನ ಪುತ್ರ ನಾಗರಾಜ ಸಿದ್ದಪ್ಪ ಆಲ್ವಿ (13) ಈತನಿಗೂ ಚಾಕುವಿನಿಂದ ಹೊಟ್ಟೆಗೆ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಎರಡನೇ ಪುತ್ರ ಧನುಷ್ ಕುಮಾರ (8) ಎಂಬ ಬಾಲಕನ ಮೇಲೆಯೂ ಹಲ್ಲೆ ನಡೆಸಿದ್ದಾನೆ. ಗಾಯಗೊಂಡಿದ್ದ ಅಮೃತ ಮತ್ತು ಅವರ ಎರಡನೇ ಪುತ್ರ ಧನುಷ್ ಕುಮಾರ ಅವರನ್ನು ಗ್ರಾಮಸ್ಥರು ತಕ್ಷಣವೇ ಸಿಂಧನೂರು ನಗರದ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ಬಸವರಾಜನನ್ನು ಪೊಲೀಸರು ಬಂಧಿಸಿದ್ದಾರೆ.

ಸಿಂಧನೂರಿನ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಾಕು ಇರಿತದಿಂದ ಗಾಯಗೊಂಡಿರುವ ಅಮೃತಾ ಅವರು ಚಿಕಿತ್ಸೆ ಪಡೆಯುತ್ತಿರುವುದು.

---

# ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ: ಆಕ್ಷೇಪಣೆಗೆ ಅರ್ಜಿ ಆಹ್ವಾನ

• **ಕನ್ನಡಪ್ರಭ ವಾರ್ತೆ** ರಾಯಚೂರು

ಶಿಶು ಅಭಿವೃದ್ಧಿ ಯೋಜನೆ ರಾಯಚೂರು ವ್ಯಾಪ್ತಿಗೆ ಬರುವ ರಾಮಾಂಜಿನೇಯ್ಯ ಕಾಲೋನಿ - 01ನೇ ಅಂಗನವಾಡಿ ಕೇಂದ್ರದ ಅಂಗನವಾಡಿ ಸಹಾಯಕಿ ಪದ್ಮಾವತಿ ಡಿ. ಹೆಚ್. ಆನಂದ (ಪರಿಶಿಷ್ಟ ಪಂಗಡ) ಅವರನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಿರುವುದರಿಂದ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಅರ್ಜಿ ಸಲ್ಲಿಸುವವರು ಸೂಕ್ತ ದಾಖಲಾತಿಗಳೊಂದಿಗೆ ಮೇ 6ರೊಳಗೆ ಶಿಶು ಅಭಿವೃದ್ಧಿ ಇಲಾಖೆಗೆ ಅರ್ಜಿ ಸಲ್ಲಿಸಬಹುದೆಂದು ಶಿಶು ಅಭಿವೃದ್ಧಿ ಯೋಜನಾ ಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

## ಉದ್ಯೋಗ ಖಾತ್ರಿ ಕೆಲಸದ ವೇಳೆ ಹೃದಯಾಘಾತ; ಕಾರ್ಮಿಕ ಸಾವು

**ಸಿಂಧನೂರು:** ತಾಲೂಕಿನ ಮುಳ್ಳೂರು ಕ್ಯಾಂಪಿನ ನಿವಾಸಿ ಅಂಬಣ್ಣ (62) ಬುಧವಾರ ಮಧ್ಯಾಹ್ನ ಉದ್ಯೋಗ ಖಾತ್ರಿ ಯೋಜನೆ ಕೆಲಸ ಮಾಡುವ ಸಮಯದಲ್ಲಿ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.



ಬೆಳಗ್ಗೆ 10 ಗಂಟೆಗೆ ಕೆಲಸ ಪ್ರಾರಂಭ ಮಾಡುವ ಪೂರ್ವದಲ್ಲಿ ಫೋಟೋ ತೆಗೆದು ಕೆಲಸಕ್ಕೆ ಹಾಜರು ಪಡಿಸಿಕೊಂಡಿದ್ದರು. ನಂತರ ಕಾಲುವೆ ಕೆಲಸದ ಯೋಜನೆಯಲ್ಲಿ ತೊಡಗಿಕೊಂಡಿದ್ದರು. ಆದರೆ ಮಧ್ಯಾಹ್ನ 12 ಗಂಟೆಗೆ ಫೋಟೋ ತೆಗೆಸಿಕೊಳ್ಳುವ ಪೂರ್ವದಲ್ಲಿ ಏಕಾಏಕಿ ಕುಸಿದು ಬಿದ್ದು ಅಂಬಣ್ಣ ಸಾವನ್ನಪ್ಪಿದ್ದಾರೆ. ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಮೃತಪಟ್ಟಿರುವುದರಿಂದ ಮೃತ ಅಂಬಣ್ಣ ಅವರ ಕುಟುಂಬಕ್ಕೆ ರಾಜ್ಯ ಸರ್ಕಾರ ಸೂಕ್ತ ಪರಿಹಾರ ನೀಡಬೇಕು. ಮುಂದೆ ಇಂತಹ ಘಟನೆಗಳು ನಡೆಯದಂತೆ ನೆರಳಿನ ವ್ಯವಸ್ಥೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಬಸವಂತರಾಯಗೌಡ ಕಲ್ಲೂರು ಒತ್ತಾಯಿಸಿದ್ದಾರೆ.

AMBIT Finvest Pragati ke partner
**AMBIT FINVEST PRIVATE LIMITED**
**ಆಂಬಿಟ್ ಫಿನ್‌ವೆಸ್ಟ್ ಪ್ರೈವೇಟ್ ಲಿಮಿಟೆಡ್**
ಕಾರ್ಪೋರೆಟ್ ಕಛೇರಿ: ಕನಾಕಿಯಾ ವಾಲ್ ಸ್ಟ್ರೀಟ್, 5ನೇ ಮಹಡಿ, ಎ 506-510, ಅಂಧೇರಿ- ಕುರ್ಲಾ ರಸ್ತೆ, ಅಂಧೇರಿ ಪೂರ್ವ, ಮುಂಬೈ - 400093.
**ಡಿಮಾಂಡ್ ನೋಟೀಸ್** (2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ (''ಕಾಯಿದೆ'') ಮತ್ತು 2002ರ ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳ (''ನಿಯಮಗಳು'') ಇವುಗಳ ಕಟ್ಟಳೆಗಳಡಿ.
ಆದಾಗ್ಯೂ, ಆಂಬಿಟ್ ಫಿನ್‌ವೆಸ್ಟ್ ಪ್ರೈವೇಟ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು 2002ರ ಹಣಕಾಸು ಆಸ್ತಿಗಳ ಭದ್ರತೆ ಹಾಗೂ ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ (ಜಾರಿ) ಕಾಯಿದೆಯಡಿ ಮತ್ತು 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 3ರ ಜೊತೆ ಓದಿಕೊಳ್ಳಬೇಕಾದ ಸದರಿ ಕಾಯಿದೆ ಕಲಂ 13(12)ರಡಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುತ್ತಾ ಕಾಯಿದೆಯ ಕಲಂ 13(2)ರಡಿ ಕೆಳಕಂಡ ಸಾಲಗಾರ(ರಿ)ಗೆ ಕರೆ ನೀಡಿ, ಸೂಚನೆಗಳನ್ನು ಜಾರಿ ಮಾಡಿ ಕೆಳಕಂಡಂತೆ ತಿಳಿಯಪಡಿಸಿರುವ ಬಾಕಿ ಸಾಲದ ಮೊತ್ತದ ಜೊತೆಗೆ ಸಂಬಂಧಿಸಿದ ಸೂಚನೆಗಳಲ್ಲಿ ನಮೂದಿಸಲಾದ ತದನಂತರದ ಬಡ್ಡಿಯು ಸೇರಿದ ಬಾಬ್ತನ್ನು ಸದರಿ ಸೂಚನೆಗಳ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿ ಮಾಡಲು ಸೂಚಿಸಿದ್ದರು. ಕೆಳಸಹಿದಾರರು ಸಾಲಗಾರರು ಡಿಮಾಂಡ್ ನೋಟೀಸ್‌ಗಳನ್ನು ನೀಡಿದರೂ ಬೇಕೆಂತಲೇ ತಪ್ಪಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಬಲವಾಗಿ ತಿಳಿದುಕೊಂಡಿರುತ್ತಾರೆ. ಆದುದರಿಂದ ಈ ಮೂಲಕ ನೋಟೀಸ್ ಜಾರಿಗೊಳಿಸಿ ನಿಮಯಮಗಳಂತೆ ಅಂಟಿಸಲಾಗಿದೆ ಮತ್ತು ಡಿಮಾಂಡ್ ನೋಟೀಸ್(ಗಳ) ಸಾರಾಂಶ ಪ್ರಕಟಿಸಲಾಗಿದೆ ಈ ಕೆಳಗಿನಂತಿದೆ.

| ಸಾಲಗಾರ(ರ) ಹೆಸರು | ಡಿಮಾಂಡ್ ನೋಟೀಸ್ ದಿನಾಂಕ ಮೊತ್ತ |
|---|---|
| 1. ರವೀಂದ್ರ ಮಾಲ್ಲಣ್ಣ ಕಣ್ಣೂರ್ 2. ಜಕ್ಕಮ್ಮ ರವೀಂದ್ರ ಕಣ್ಣೂರ್ LAN Nos. SIA000001024852 | 25.04.2026 ಮತ್ತು ರೂ. 21,60,877.63/- (ರೂಪಾಯಿ ಇಪ್ಪತ್ತೊಂದು ಲಕ್ಷದ ಅರವತ್ತು ಸಾವಿರದ ಎಂಟು ನೂರ ಎಪ್ಪತ್ತೇಳು ರೂ. ಅರವತ್ತಮೂರು ಪೈಸೆಗಳು ಮಾತ್ರ) 09.04.2026 ರಂದು ಇದ್ದಂತೆ |

ಸ್ಥಿರಾಸ್ತಿಯ ವಿವರ/ ಅಡಮಾನಿತ ಆಸ್ತಿ
ಸಕಲ ಸಮಸ್ತವೂ ಸೇರಿದಂತೆ ವಸತಿ ಆಸ್ತಿ, ಜಿಪಿ ಸಂ. 792, ಆರ್‌ಡಿಪಿಆರ್ ಸಂ. 150700500600120180, ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 24 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: 06 ಮೀಟರ್‌ಗಳು, ಒಟ್ಟಾರೆ ಅಳತೆ: 144.00 ಚ.ಅ. ಯಂಕಚಿ ಗ್ರಾಮ, ತಾಲ್ಲೂಕು- ಸಿಂಧಗಿ ಮತ್ತು ಜಿಲ್ಲೆ ವಿಜಯಪು- 586128, ಉಪ- ನೋಂದಣಿ ಜಿಲ್ಲೆ: ಸಿಂದಗಿ. ಚಕ್ಕುಬಂದಿ ಈ ಕೆಳಗಿನಂತಿದೆ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಶ್ರೀಮಂತ್ ಹಚದಾದ್ ರವರ ಆಸ್ತಿ, ದಕ್ಷಿಣಕ್ಕೆ: ಅಂಬೋಜಿ ಮಂಗಳೂರು ರವರ ಆಸ್ತಿ.

ಸಾಲಗಾರ(ರು)ಗಳಿಗೆ ಸಲಹೆ ಮಾಡುವುದೇನೆಂದರೆ ಡಿಮಾಂಡ್ ನೋಟೀಸ್‌ನಂತೆ ತಾವು ನಡೆದುಕೊಳ್ಳಬೇಕು ಮತ್ತು ಡಿಮಾಂಡ್ ಮಾಡಿರುವ ಬಾಕಿ ಮೊತ್ತವನ್ನು ಪೂರ್ತಿ ಪಾವತಿಯಾಗುವ ದಿನಾಂಕದವರೆಗೂ ಅನ್ವಯಿಸುವ ಬಡ್ಡಿ, ಹೆಚ್ಚುವರಿ ಬಡ್ಡಿ, ಚಾರ್ಟ್ಸ್ ಚಾರ್ಜ್‌ಗಳು ಕಾಸ್ಟ್ ಮತ್ತು ವೆಚ್ಚಗಳ ಸೇರಿದ ಮೊತ್ತವನ್ನು ನೋಟೀಸ್ ನೀಡಿದ 60 ದಿನಗಳ ಒಳಗಾಗಿ ಪಾವತಿ ಮಾಡಬೇಕು. ಸಾಲಗಾರರು ತಿಳಿದುಕೊಳ್ಳಬೇಕಾದ ಸೂಚನೆಯೇನೆಂದರೆ, ಎಎಫ್‌ಪಿಎಲ್ ಸೆಕ್ಯೂರ್ಡ್ ಕ್ರೆಡಿಟರ್ ಆಗಿದ್ದು, ಸಾಲಗಾರನು(ರು) ಪಡೆದುಕೊಂಡಿರುವ ಸಾಲವು ಭದ್ರತಾ ಸಾಲವಾಗಿದ್ದು, ಸಾಲಕ್ಕಾಗಿ ಸಾಲಗಾರನು(ರು) ಭದ್ರತಾ ಆಸ್ತಿಯ(ಗಳ)ನ್ನು ಅಡಮಾನ ಮಾಡಿರುತ್ತಾರೆ. ಸಾಲಗಾರನು(ರು) ನಿಗದಿತ ಅವಧಿಯೊಳಗಾಗಿ ಅವರು ಪಡೆದುಕೊಂಡಿರುವ ಹೊಣೆಗಾರಿಕೆ (ಸಾಲ)ಯನ್ನು ಪೂರ್ತಿಯಾಗಿ ಪಾವತಿ ಮಾಡಲು ವಿಫಲರಾದಲ್ಲಿ ಎಎಫ್‌ಪಿಎಲ್ ಕಾಯಿದೆಯ ಕಲಂ 13(4) ರಡಿ ಭದ್ರತಾ ಆಸ್ತಿಯ(ಗಳ)ನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಮಾರಾಟ ಅಥವಾ ಕಾಯಿದೆಯಡಿ ಲಭ್ಯವಾಗುವ ಇನ್ನಾವುದೇ ಪರಿಹಾರಗಳಂತೆ ಕ್ರಮ ಕೈಗೊಳ್ಳಲು ಮಾತ್ರ ಮಿತಿಗೊಳ್ಳದೇ ಚಲಾಯಿಸಲು ಬ್ಯಾಂಕ್‌ಗೆ ಅಧಿಕಾರವಿರುತ್ತದೆ. ತದನಂತರ ಎಎಫ್‌ಪಿಎಲ್ ಭದ್ರತಾ ಆಸ್ತಿಯನ್ನು ಮಾರಾಟ ಮಾಡಿ ಬಾಕಿ ವಸೂಲು ಮಾಡಿಕೊಳ್ಳಬಹುದು ಹಾಗೂ ಅಥವಾ ವರ್ಗಾವಣೆ ಮಾಡುವ ಮುಂಚೆ ಎಎಫ್‌ಪಿಎಲ್ ಭದ್ರತಾ ಆಸ್ತಿಯನ್ನು(ಗಳನ್ನು) ಅಟಾಚ್ ಮತ್ತು /ಅಥವಾ ಸೀಲ್ ಮಾಡಬಹುದಾಗಿದೆ. ಎಎಫ್‌ಪಿಎಲ್‌ಗೆ ಸಾಲ ಬಾಕಿ ವಸೂಲಾತಿಗಾಗಿ ಅಂದರೆ ಅಡಮಾನಿತ ಆಸ್ತಿ ಮಾರಾಟ ಮಾಡಿದ ನಂತರ ಬರುವ ಹುಟ್ಟುವಳಿ ಸಾಲದ ಬಾಕಿಗೆ ಸರಿಹೊಂದದಿದ್ದ ಪಕ್ಷದಲ್ಲಿ ಕಾನೂನು ಕ್ರಮ ಕೈಗೊಳ್ಳಲು ಹಕ್ಕು ಹೊಂದಿರುತ್ತದೆ. ಈ ಪರಿಹಾರ ಮಾರ್ಗವು ಎಎಫ್‌ಪಿಎಲ್‌ಗೆ ಇತರೆ ಕಾನೂನು ಲಭ್ಯವಾದ ಇತರೆ ಪರಿಹಾರಗಳ ಕಾನೂನು ಕ್ರಮಗಳ ಜೊತೆಗೆ ಹೆಚ್ಚುವರಿ ಮತ್ತು ಸ್ವತಂತ್ರದ್ದಾಗಿರುತ್ತದೆ. ಕಾಯಿದೆಯ ಕಲಂ 13(8)ರ ಬಗ್ಗೆ ಸಾಲಗಾರ(ರು) ಗಮನವನ್ನು ಸೆಳೆಯಲಾಗಿದೆ. ಇದು ಸಾಲಗಾರ(ರು) ಭದ್ರತಾ ಆಸ್ತಿ(ಗಳ)ನ್ನು ಬಿಡಿಸಿಕೊಳ್ಳಲಿರುವ ಕಾಲಾವಕಾಶದ ಬಗ್ಗೆ ತಿಳಿಸುತ್ತದೆ ಮತ್ತು ಕಲಂ 13(13)ರಲ್ಲಿರುವಂತೆ ಮೇಲಿನ ಕಟ್ಟಲೆಗಳನ್ನು ಪಾಲಿಸಬೇಕು. ಅದರಂತೆ ಸಾಲಗಾರ(ರು) ಭದ್ರತಾ ಆಸ್ತಿಗಳ ಅಥವಾ ಮಾರಾಟ, ಲೀಸ್ ಅಥವಾ ಬೇರೆ ರೀತಿಯಲ್ಲಿ (ಸಾಮಾನ್ಯ ವ್ಯವಹಾರದ ಹೊರತಾಗಿ) ಯಾವುದೇ ಭದ್ರತಾ ಆಸ್ತಿ(ಗಳನ್ನು) ವರ್ಗಾವಣೆ ಮಾಡುವುದನ್ನು ನಿರ್ಬಂಧಿಸಲಾಗಿದೆ/ನಿಷೇಧಿಸಲಾಗಿದೆ. ಎಎಫ್‌ಪಿಎಲ್ ನ ಪೂರ್ವ ಲಿಖಿತ ಒಪ್ಪಿಗೆಯಿಲ್ಲದೆ ಕಾನೂನುನನ್ನು ಅನುಸರಿಸದಿರುವುದು ಸದರಿ ಕಾಯಿದೆಯ ಸರ್ಫೇಸಿ ಕಾಯಿದೆ ಕಲಂ 29ರಡಿ ಶಿಕ್ಷಾರ್ಹ ಅಪರಾಧವಾಗುತ್ತದೆ. ಡಿಮಾಂಡ್ ನೋಟೀಸ್‌ನ ಪ್ರತಿ ಕೆಳಸಹಿದಾರರೊಂದಿಗೆ ಲಭ್ಯವಿರುತ್ತದೆ ನೀವು ಅಪೇಕ್ಷಿಸಿಪಟ್ಟಲ್ಲಿ ನೀವು ಕೆಳಸಹಿದಾರರಿಂದ ಯಾವುದೇ ಕೆಲಸದ ದಿನದ ಕಛೇರಿಯ ಮಾಮೂಲು ಕೆಲಸದ ಅವಧಿಯಲ್ಲಿ ಪಡೆದುಕೊಳ್ಳಬಹುದಾಗಿದೆ.
ದಿನಾಂಕ: 30.04.2026, ಸ್ಥಳ: ಗಲಬುರ್ಗಿ, ಕರ್ನಾಟಕ
ಸಹಿ/- ಅಂಕೆತ್ ಮೋರೆ ಅಧಿಕೃತ ಅಧಿಕಾರಿ, ಆಂಬಿಟ್ ಫಿನ್‌ವೆಸ್ಟ್ ಪ್ರೈವೇಟ್ ಲಿಮಿಟೆಡ್

**MANAPPURAM FINANCE LTD.**
CIN : L65910KL1992PLC006623
Registered Office : W - 4/ 638A, Manappuram House, P.O. Valapad, Thrissur - 680 567, Kerala, India

**ಹರಾಜು ಪ್ರಕಟಣೆ**

ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/05/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 85%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ ('ನಲ್ಲಿ') ಐಟಂ ಹೆಸರಿನ ಕ್ರಮದಲ್ಲಿದೆ

ಅಡವುಗಳ ಪಟ್ಟಿ :
ಗುಲ್ಬರ್ಗ, ಗುಂಜ್ ರೋಡು ಗುಲಬರ್ಗಾ, 0122940730026236, ಅಬ್ದುಲ್ ಸತ್ತಾರ್ ಮೊಹಮ್ಮದ್ ಹುಸೇನ್, 496300/-, ಬ್ರಾಡ್ ಬ್ಯಾಂಗಲ್ಸ್ 1, ಬೀದರ್, ಹುಮ್ನಾಬಾದ್, 0122510700048884, ಶ್ರವಣ್, 140700/-, ಚೈನ್ 1, ಗುಲ್ಬರ್ಗ, ಜೇವರ್ಗಿ, 0136250730034484, ಸಾವಿತ್ರಿ ಸೋಮರಾಯ ಬಡಿಗೇರ, 9428/-, ಉ-ಡ್ರಾಪ್ಸ್ 1, ರಾಯಚೂರು, ಸಿಂಧನೂರು, 0125470700055234, ಅಭಿಜಿತ್ ರಾಯ್, 20000/-, ಇಯರ್ ರಿಂಗ್ಸ್ 1, 5256, ಕಾಮಾಕ್ಷಿ, 26000/-, ಲಾಕೆಟ್ 1,ಸ್ಟಡ್ 1, 0125470730036262, ಮುದುಕಾನ, 28170/-, ಸ್ಟಡ್ 1,ಉ-ಡ್ರಾಪ್ಸ್ 1, ಯಾದಗಿರಿ, ಯಾದಗಿರಿ ಬಸ್ ಸ್ಟ್ಯಾಂಡ್, 0115840730027113, ತಿಮ್ಮಯ್ಯ , 37700/-, ಉ-ಡ್ರಾಪ್ಸ್ 1,

ಮೇಲಿನ ಹರಾಜಿನಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿಗಳು ಈ ಮುಂದೆ ತಿಳಿಸಿರುವುದನ್ನು ಅನುಸರಿಸತಕ್ಕದ್ದು:- ಆಸಕ್ತಿಯುಳ್ಳ ಸವಾಲು ಕೂಗುವವರು (ಬಿಡ್ಡರ್ ಗಳು) ಎನ್‌ಇಎಫ್‌ಟಿ/ಆರ್ ಟಿಜಿಎಸ್ ವಿಧಾನದ ಮೂಲಕ ರೂ. 10,000/ ಅನ್ನು ಇಎಂಡಿ (ವಿಫಲಗೊಂಡ ಸವಾಲು ಕೂಗುವವರಿಗೆ ಮರುಪಾವತಿಯಾಗುವಂಥದ್ದು) ಆಗಿ ಹರಾಜಿನ ದಿನದಂದೇ ಸಲ್ಲಿಸಬೇಕು. ಸವಾಲು ಕೂಗುವವರು ಮಾನ್ಯವಾದ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಇಟ್ಟುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 9072607147 ಅನ್ನು ಸಂಪರ್ಕಿಸಿ.
ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಲಿ. ಪರವಾಗಿ

**ಹೊಸಕೋಟೆ ಯೋಜನಾ ಪ್ರಾಧಿಕಾರ**
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂರವಾಣಿ/ಫ್ಯಾಕ್ಸ್ : 080-2793 4470 / 2793 5412 ಇ-ಮೇಲ್: hosakote.pa@gmail.com URL : www.hosakote.tpa.gov.in
ಸಂಖ್ಯೆ: ಹೊಯೋಪ್ರಾ/ಭೂ.ಉ.ನಿ/02/2026-27 ದಿನಾಂಕ: 28.04.2026

**ಸಾರ್ವಜನಿಕ ಪ್ರಕಟಣೆ**

**ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗದಿಪಡಿಸಲು ಕೋರಿರುವ ಬಗ್ಗೆ.**

***

ಅರ್ಜಿದಾರರಾದ ಲೇಟ್ ಹೆಚ್.ಎಂ. ಮುನಿಯಪ್ಪ ಇವರ ಮಕ್ಕಳಾದ ಶ್ರೀ ಮುನಿಕೆಂಪಣ್ಣ ಮತ್ತು ಶ್ರೀ ಎಂ. ಹುಲ್ಲೂರಪ್ಪ ಇವರ ಪರವಾಗಿ ಜಿಪಿಎದಾರರಾದ ಮೆ॥ ವಿ.ಆರ್. ಅರ್ಬನ್ ಡೆವಲಪರ್ಸ್ ಇದರ ಪರವಾಗಿ ಮ್ಯಾನೇಜಿಂಗ್ ಪಾರ್ಟ್‌ನರ್ ಆದ ಶ್ರೀ ಕಿಶೋರ್ ಆರ್. ಇವರು ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಕಣ್ಣೂರಹಳ್ಳಿ ಗ್ರಾಮದ ಸ.ನಂ. 163/1 ರ ಪೈಕಿ 16 1/2 ಗುಂಟೆ ವಿಸ್ತೀರ್ಣದ ಜಮೀನನ್ನು **"ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ಉದ್ದೇಶದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಭೂ ಉಪಯೋಗ ನಿಗದಿಪಡಿಸಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ **ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿರುವ** ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು/ ಬರುತ್ತಿದ್ದು, "ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಯಾಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ನಿಗದಿಪಡಿಸುವ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ/ಸೂಚನೆ/ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

**ಸಹಿ/-**
**ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.**
ವಾ.ಸಾ.ಸಂ.ಇ/ವಾಪ್ರ/425/ಆಕಾರ್/2026-27

**ಕೇಂದ್ರ ರೈಲ್ವೆ**
**ಸೋಲಾಪುರ ವಿಭಾಗ**
**ಇಂಜಿನಿಯರಿಂಗ್ ವರ್ಕ್ಸ್**
ಭಾರತದ ರಾಷ್ಟ್ರಪತಿಗಳ ಪರವಾಗಿ ಸೋಲಾಪುರದ ಕೇಂದ್ರ ರೈಲ್ವೆಯ ವಿಭಾಗೀಯ ರೈಲ್ವೆ ವ್ಯವಸ್ಥಾಪಕರು (ಕೆಲಸಗಳು), ಈ ಕೆಳಗಿನ ಕಾಮಗಾರಿಗಳಿಗಾಗಿ ಹೆಸರಾಂತ ಸಂಸ್ಥೆಗಳು/ಗುತ್ತಿಗೆದಾರರಿಂದ ಇ-ಟೆಂಡರ್ ಆಹ್ವಾನಿಸಿದ್ದಾರೆ: (1) ಟೆಂಡರ್ ಸೂಚನೆ ಸಂಖ್ಯೆ: 12-20226- ಸೀನಿಯರ್ ಡಿಇಎನ್‌ಎಸ್. ಕೆಲಸದ ಹೆಸರು: ಸೋಲಾಪುರದ DRM ಕಚೇರಿ ಆವರಣದಲ್ಲಿ ಉದ್ಯಾನದ ದುರಸ್ತಿ ಮತ್ತು ನಿರ್ವಹಣೆ (ಹಳೆಯ ಸಮ್ಮೇಳನ ಸಭಾಂಗಣದ ಹಿಂದೆ ಹಳೆಯ ADRM ಕೊಠಡಿಯ ಮುಂಭಾಗದಲ್ಲಿರುವ ಪಾರಂಪರಿಕ ಉದ್ಯಾನ), A/93, A/94, A/95, A/92, B/175, RB-IV, 122/A&B, RB-IV 121/A&B, RB-IV/208, RB-IV/207, F/37/A&B, F/36/A&B, C@ 47 & 47@A&B, C@ 47'47@A&B (CRMS ಕಚೇರಿ), NRMU ಕಚೇರಿ, RB-V/136, 137, RBIV/138, 139, 150, RB- V/146, 147, 149, 155, 156 ಆಫೀಸರ್ಸ್ ಕಾಲೋನಿ, ಡಾ. ಪ್ರಧಾನ್ ಆಸ್ಪತ್ರೆ ಉದ್ಯಾನ ಮತ್ತು ನಿಲ್ದಾಣದ ಮುಂಭಾಗ, ಉದ್ಯಾನ ಸಿದ್ದೇಶ್ವರ ಅಧಿಕಾರಿಗಳ ಕ್ಲಬ್‌ನಲ್ಲಿ ಅಧಿಕಾರಿಗಳ ವಿಶ್ರಾಂತಿ ಗೃಹ ಮತ್ತು ಈಜುಕೊಳದ ಬಳಿ, ಟ್ರ್ಯಾಕ್ ಮೆಷಿನ್ ಡಿಪೋದಲ್ಲಿ ಉದ್ಯಾನ, ಆರ್‌ಪಿಎಫ್ ಬ್ಯಾರಕ್, ಸಿ & ಡಬ್ಲ್ಯೂ ಕೋಚಿಂಗ್ ಕಾಂಪ್ಲೆಕ್ಸ್, ರನ್ನಿಂಗ್ ರೂಮ್, ರೈಲ್ವೆ ಆಸ್ಪತ್ರೆ ಉದ್ಯಾನ, ಗಣೇಶ್ ಹಾಲ್ ಕಾಲೋನಿ (ಎರಡು ವರ್ಷಗಳ ಕಾಲ ಉದ್ಯಾನದ ನಿರ್ವಹಣೆ). **ಕೆಲಸದ ಅಂದಾಜು ವೆಚ್ಚ :** ₹ 12029354.48, **ಅರ್ನೆಸ್ಟ್ ಹಣ :** ₹ 240600.00. (2) **ಟೆಂಡರ್ ಸೂಚನೆ ಸಂಖ್ಯೆ:** 13-20226-ಸೀನಿಯರ್ ಡಿಇಎನ್‌ಎಸ್. **ಕೆಲಸದ ಹೆಸರು:** (i) ಸೂರ್-ವಾಡಿ ವಿಭಾಗದಲ್ಲಿ ಕಿಮೀ 584.8 ರಿಂದ ಕಿಮೀ 593.6 ರವರೆಗಿನ ಟಿಡಬ್ಲ್ಯೂಆರ್ ಕೆಲಸವು ಎಸ್‌ಯುಆರ್ ವಿಭಾಗದಲ್ಲಿ ADEN/KLBG ಉಪವಿಭಾಗದ ಅಡಿಯಲ್ಲಿ ಒಟ್ಟು 8.8 ಕಿಮೀ ಮತ್ತು (ii) ಸೀನಿಯರ್ ಡಿಇಎನ್/ಎಸ್/ಎಸ್‌ಯುಆರ್ ವಿಭಾಗದ ಅಡಿಯಲ್ಲಿ ವಿವಿಧ ಸ್ಥಳಗಳಲ್ಲಿ 52 ಕೆಜಿ ಮತ್ತು 60 ಕೆಜಿ ಹಳಿಗಳೊಂದಿಗೆ MFWP ಮೂಲಕ ಫ್ಲ್ಯಾಷ್ ಆದ್'ರೆ ವೆಲ್ಡಿಂಗ್ ಅನ್ನು ಕಾರ್ಯಗತಗೊಳಿಸುವುದು. **ಕೆಲಸದ ಅಂದಾಜು ವೆಚ್ಚ :** ₹ 51261705.37, **ಅರ್ನೆಸ್ಟ್ ಹಣ :** ₹ 1025200.00. (3) ಟೆಂಡರ್ ಸೂಚನೆ ಸಂಖ್ಯೆ: 14- 20226-ಸೀನಿಯರ್ ಡಿಇಎನ್‌ಎಸ್. ಕೆಲಸದ ಹೆಸರು: ಸುರ್-ವಾಡಿ ವಿಭಾಗದ ಸೇತುವೆ ಸಂಖ್ಯೆ 596/1 (ಡಿಎನ್) ನಲ್ಲಿ ಟಿಬಿಎಸ್‌ಆರ್ ಕೆಲಸ (ಒಟ್ಟು 1040 ಸಂಖ್ಯೆಗಳು). **ಕೆಲಸದ ಅಂದಾಜು ವೆಚ್ಚ :** ₹ 31075076.42, **ಅರ್ನೆಸ್ಟ್ ಹಣ :** ₹ 621500.00. (4) ಟೆಂಡರ್ ಸೂಚನೆ ಸಂಖ್ಯೆ: 15-20226-ಸೀನಿಯರ್ ಡಿಇಎನ್‌ಎಸ್. ಕೆಲಸದ ಹೆಸರು: 1. ADEN/KLBG ಉಪ-ವಿಭಾಗದ ಅಡಿಯಲ್ಲಿ GUR ನಲ್ಲಿ ಅಂಗಡಿ ಸೌಲಭ್ಯಗಳೊಂದಿಗೆ ಹೊಸ PWI ಕಚೇರಿಗಳ ಡಿಪೋ ನಿರ್ಮಾಣ. 2. ADEN/KLBG ಉಪವಿಭಾಗದ ಅಡಿಯಲ್ಲಿ ವಾಡಿಯಲ್ಲಿ ಅಂಗಡಿಯೊಂದಿಗೆ PWI ಕಚೇರಿ ಮತ್ತು ಅಂಗಡಿ ಮತ್ತು IOW ಕಚೇರಿಯ ನಿರ್ಮಾಣ. 3. ADEN/KLBG ಅಡಿಯಲ್ಲಿ ವಾಡಿ ನಿಲ್ದಾಣದಲ್ಲಿ ಮೈನರ್ ಟಿಆರ್‌ಡಿ ಡಿಪೋ ನಿರ್ಮಾಣಕ್ಕಾಗಿ ಕಟ್ಟಡ ಕಾಮಗಾರಿ. **ಕೆಲಸದ ಅಂದಾಜು ವೆಚ್ಚ :** ₹ 58287025.01, **ಅರ್ನೆಸ್ಟ್ ಹಣ :** ₹ 1165800.00. ಪೂರ್ಣಗೊಳ್ಳುವ ಅವಧಿ: SI ಗೆ 24 ತಿಂಗಳುಗಳು. SI ಸಂಖ್ಯೆ 1 ಮತ್ತು 12 ತಿಂಗಳುಗಳು SI ಸಂಖ್ಯೆ 2, 3 ಮತ್ತು 4. ನಿರ್ವಹಣಾ ಅವಧಿ: SI ಗೆ NA. SI ಸಂಖ್ಯೆ 1, 2 & 3 ಮತ್ತು ಕ್ರಮ ಸಂಖ್ಯೆ 4 ಕ್ಕೆ 24 ತಿಂಗಳುಗಳು. ಟೆಂಡರ್ ತೆರೆಯುವ ದಿನಾಂಕ: Sl. ಸಂಖ್ಯೆ 1, 2 & 4 ಕ್ಕೆ 18.05.2026 ಮತ್ತು SI ಸಂಖ್ಯೆ 3 ಕ್ಕೆ 20.05.2026. ಈ ಟೆಂಡರ್‌ಗೆ ನೀಡಲಾದ ಯಾವುದೇ ಬದಲಾವಣೆಗಳು/ ತಿದ್ದುಪಡಿಗಳನ್ನು ಗಮನಿಸಲು ಟೆಂಡರ್ ಮುಕ್ತಾಯದ ದಿನಾಂಕದ ಮೊದಲು ಆಗಾಗ್ಗೆ ವೆಬ್‌ಸೈಟ್‌ಗೆ ಭೇಟಿ ನೀಡಲು ಸಂಭಾವ್ಯ ಟೆಂಡರ್‌ದಾರರಿಗೆ ಸೂಚಿಸಲಾಗಿದೆ. ವೆಬ್‌ಸೈಟ್: www.ireps.gov.in
EXP-14
ಟಿಕೆಟ್‌ಗಳಿಗಾಗಿ ರೈಲ್ ಒನ್ ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ

ಕನ್ನಡಪ್ರಭ ಚಿತ್ರಪ್ರಭ
ಪ್ರತಿ ಶುಕ್ರವಾರ ಸಿನಿಮಾ ಸುದ್ದಿಗಳ ಹಬ್ಬ